**ಕರ್ನಾಟಕ ಸರ್ಕಾರ**

ಸಂಖ್ಯೆ: STI-TRNG0TRNG/73/2023

ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆ
8ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-560001, ದಿನಾಂಕ: 04.11.2023

**ಅಧಿಕೃತ ಜ್ಞಾಪನ**

**ವಿಷಯ**: ಆಯವ್ಯಯ ತಯಾರಿಕೆ ವಿಷಯದ ಕುರಿತಂತೆ ತರಬೇತಿ ಆಯೋಜಿಸಿರುವ ಕುರಿತು.

**ಉಲ್ಲೇಖ**:
1. ಸಚಿವಾಲಯ ತರಬೇತಿ ಸಂಸ್ಥೆಯ ಅಧಿಕೃತ ಜ್ಞಾಪನ ಸಂಖ್ಯೆ: STI-TRNG0TRNG/16/2023, ದಿನಾಂಕ:04.03.2023.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 272 ಆಸಸೇ 2012 ದಿನಾಂಕ:26.12.2012.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ(ಆಸು) 16 ಇಆತ 2021, ದಿನಾಂಕ:18.03.2021.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಅಧಿಕೃತ ಜ್ಞಾಪನದಲ್ಲಿ ಕರ್ನಾಟಕ ಸರ್ಕಾರ ಸಚಿವಾಲಯ ತರಬೇತಿ ಸಂಸ್ಥೆಯಿಂದ ಕರ್ನಾಟಕ ಸರ್ಕಾರ ಸಚಿವಾಲಯ, ಕರ್ನಾಟಕ ವಿಧಾನ ಸಭೆ/ ಪರಿಷತ್ ಸಚಿವಾಲಯ ಮತ್ತು ಕರ್ನಾಟಕ ಲೋಕಸೇವಾ ಆಯೋಗದಲ್ಲಿನ ಅಧಿಕಾರಿ/ ಸಿಬ್ಬಂದಿಗಳಿಗೆ 2023-24ನೇ ಸಾಲಿನಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಅದರಲ್ಲಿನ ಕ್ರಮ ಸಂಖ್ಯೆ-26ರನ್ವಯ, ಕರ್ನಾಟಕ ಸರ್ಕಾರ ಸಚಿವಾಲಯ, ಕರ್ನಾಟಕ ವಿಧಾನ ಸಭೆ/ ಪರಿಷತ್ತು ಮತ್ತು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಆಯವ್ಯಯ ಕೆಲಸ ಕಾರ್ಯಗಳಿಗೆ ಸಂಬಂಧಿಸಿದ ಶಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳಿಗೆ **"2024-25ನೇ ಸಾಲಿನ ಆಯವ್ಯಯ ತಯಾರಿಕೆ, ಹಣಕಾಸು ಇಲಾಖೆಗೆ ಆಯವ್ಯಯ ಪಟ್ಟಿ ಸಲ್ಲಿಸುವ ಕ್ರಮ, ಅನುದಾನ ಬಿಡುಗಡೆ/ ಅಧಿಕಾರ ಪ್ರತ್ಯಾಯೋಜನೆ/ ಮರು ಹೊಂದಾಣಿಕೆ, ಆಯವ್ಯಯ ಮಹಾಲೇಖಪಾಲರ ಆಕ್ಷೇಪಣೆ ಇತ್ಯಾದಿ ಹಾಗೂ ಹೆಚ್.ಆರ್.ಎಂ.ಎಸ್. ನಲ್ಲಿ ಅಪೆಂಡಿಕ್ಸ್-ಬಿ ತಯಾರಿಕೆ"** ವಿಷಯಗಳ ಕುರಿತು ಸಚಿವಾಲಯ ತರಬೇತಿ ಸಂಸ್ಥೆಯಿಂದ ದಿನಾಂಕ: 16.11.2023 ರಿಂದ 18.11.2023ರವರೆಗೆ ಮೂರು ಅರ್ಧ ದಿನಗಳ ತರಬೇತಿ ಕಾರ್ಯಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಆದ್ದರಿಂದ, ಆಯವ್ಯಯ ತಯಾರಿಕೆ ಕುರಿತಂತೆ ತರಬೇತಿ ಅವಶ್ಯವಿರುವ ಈ ಕೆಳಕಂಡ ಇಲಾಖೆಗಳ/ ವಿಭಾಗಗಳ/ ಕಚೇರಿಗಳಲ್ಲಿನ ತಲಾ ಇಬ್ಬರು ಅಧಿಕಾರಿ/ಸಿಬ್ಬಂದಿಗಳನ್ನು ಸಚಿವಾಲಯ ತರಬೇತಿ ಸಂಸ್ಥೆ, 4ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು ಇಲ್ಲಿ ದಿನಾಂಕ: 16.11.2023ರಂದು ಬೆಳಿಗ್ಗೆ 10.00 ಗಂಟೆಗೆ ತರಬೇತಿಗೆ ವರದಿ ಮಾಡಿಕೊಳ್ಳಲು ನಿಯುಕ್ತಿಗೊಳಿಸುವಂತೆ ಹಾಗೂ ತರಬೇತಿಯ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

1. ಮಾನ್ಯ ರಾಜ್ಯಪಾಲರ ಸಚಿವಾಲಯದ ಕಚೇರಿ.
2. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಇಲಾಖೆಗಳ ಆಂತರಿಕ ಆರ್ಥಿಕ ಸಲಹೆಗಾರರ ವಿಭಾಗ ಹಾಗೂ ಸಚಿವಾಲಯ ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ ಇಲಾಖಾ ಮುಖ್ಯಸ್ಥರ ಕಚೇರಿ.
3. ಮುಖ್ಯ ಚುನಾವಣಾಧಿಕಾರಿಗಳ ಕಚೇರಿ.
4. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಲೆಕ್ಕಪತ್ರ-1 ಹಾಗೂ 3).
5. ಕರ್ನಾಟಕ ಲೋಕಸೇವಾ ಆಯೋಗ.
6. ಕರ್ನಾಟಕ ವಿಧಾನಸಭೆ ಸಚಿವಾಲಯ.
7. ಕರ್ನಾಟಕ ವಿಧಾನಪರಿಷತ್ತು ಸಚಿವಾಲಯ.
8. ಸಚಿವಾಲಯ ತರಬೇತಿ ಸಂಸ್ಥೆ ಹಾಗೂ
9. ಸಚಿವಾಲಯದ ಇನ್ನಿತರೆ ಇಲಾಖೆಗಳಲ್ಲಿ ಆಯವ್ಯಯ ಕೆಲಸ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳು.

P. Vasavamba 04/11/23

**(ಪಿ.ವಾಸವಾಂಬ)**
ಉಪ ನಿರ್ದೇಶಕರು(ತರಬೇತಿ)
ಸಚಿವಾಲಯ ತರಬೇತಿ ಸಂಸ್ಥೆ

6/11

**ಇವರಿಗೆ:**

1. ಮಾನ್ಯ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.
3. ಮುಖ್ಯ ಚುನಾವಣಾಧಿಕಾರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ರಾಜ್ಯ ಚುನಾಣೆ), ಬೆಂಗಳೂರು.
4. ಸರ್ಕಾರದ ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಲೆಕ್ಕಪತ್ರ), ವಿಧಾನಸೌಧ, ಬೆಂಗಳೂರು.
5. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗಸೌಧ, ಬೆಂಗಳೂರು.
6. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ, ಬೆಂಗಳೂರು.
7. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ, ವಿಧಾನಸೌಧ, ಬೆಂಗಳೂರು.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ (ಆಸು-ತರಬೇತಿ) ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ನಿರ್ದೇಶಕರು, ಸಚಿವಾಲಯ ತರಬೇತಿ ಸಂಸ್ಥೆ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಬೆಂಗಳೂರು.
3. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.